# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2566/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/02/2018
26

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಎನ್. ರೇಗಪ್ಪ ಗೌಡ, ನೆಕ್ಲಾಜೆ ಮನೆ, ಕೆ.ಪೆರಾಜೆ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ದೂರುದಾರರಾದ ಶ್ರೀ ಎನ್. ರೇಗಪ್ಪ ಗೌಡ, ನೆಕ್ಲಾಜೆ ಮನೆ, ಕೆ.ಪೆರಾಜೆ ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ರವರು ತಹಶೀಲ್ದಾರ್, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ರವರ ವಿರುದ್ಧ ಆಪಾದಿಸಿ ಈ ಸಂಸ್ಥೆಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ತಹಶೀಲ್ದಾರರ ಕಛೇರಿಯಿಂದ 27/02/2004 ರಂದು ಮಡಿಕೇರಿ ತಾಲ್ಲೂಕು ಕೆ. ಪೆರಾಜೆ ಗ್ರಾಮದ 89/1 ಸರ್ವೆ ನಂಬರಿನಲ್ಲಿರುವ 0.03 3/4 ಎಕ್ರೆ ಜಾಗಕ್ಕೆ ಹಕ್ಕು ಪತ್ರ ದೊರೆತಿರುತ್ತದೆ. ಸದರಿ ಹಕ್ಕು ಪತ್ರ 52 ನಿವೇಶನ 14/03-04 ಆಗಿರುತ್ತದೆ. ಸದರಿ ಜಾಗಕ್ಕೆ ಒಟ್ಟು ರೂ.1725/- ನ್ನು ಚಲನ್ ಸಂಖ್ಯೆ 17/11/2003 ಪಾವತಿಸಲಾಗಿದೆ. ಸದರಿ ಆಸ್ತಿಯ ಜಾಗದ ದುರಸ್ಥಿಗಾಗಿ ಕಳೆದ ಹತ್ತು ವರ್ಷಗಳಿಂದ ಅರ್ಜಿ ಸಲ್ಲಿಸಿದರೂ ಅಧಿಕಾರಿಗಳಿಂದ ಸರಿಯಾದ ನ್ಯಾಯ ದೊರಕುತ್ತಿಲ್ಲ. ತನ್ನ ಆಸ್ತಿಯ ಮನೆ ನಿವೇಶನವನ್ನು ದುರಸ್ಥಿಗೊಳಿಸಬೇಕಾಗಿ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಎದುರುದಾರರು ತಮ್ಮ ಪತ್ರ ದಿನಾಂಕ 08/09/2014ರಲ್ಲಿ ಸದರಿ ದೂರಿಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯ ಅಂಶಗಳು ಈ ಕೆಳಕಂಡಂತೆ ಇರುತ್ತದೆ:-

> *ಅರ್ಜಿದಾರರ ಕಡತವು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿರುತ್ತದೆ. ವಾಸ್ತವವಾಗಿ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರಿಂದ ಹೊರಡಿಸಲಾದ ಸುತ್ತೋಲೆಯಂತೆ ಯಾವುದೇ ದರಕಾಸ್ತು*

*ಮಂಜೂರಾತಿಯಾದ ಪ್ರಕರಣವನ್ನು ಸರ್ವೆಗೆ ಒಳಪಡಿಸಿ ದುರಸ್ಥಿಪಡಿಸಬೇಕಾದಲ್ಲಿ ಒಂದು ಗ್ರಾಮದಲ್ಲಿ ಒಂದು ನಿರ್ದಿಷ್ಟ ಪೈಸಾರಿ ಸರ್ವೆ ನಂಬರಿನಲ್ಲಿ ಮಂಜೂರಾತಿಯನ್ನು ಹೊಂದಿಕೊಂಡ ಎಲ್ಲಾ ಫಲಾನುಭವಿಗಳ ವಿವರವನ್ನು 1 ರಿಂದ 5 ರವರೆಗಿನ ನಮೂನೆಯಲ್ಲಿ ಭರ್ತಿ ಮಾಡಿ ಎಲ್ಲಾ ಫಲಾನುಭವಿಗಳಿಗೆ ಮಂಜೂರಾದ ದರಕಾಸ್ತು ಜಾಗವನ್ನು ಒಟ್ಟಾಗಿ ದುರಸ್ಥಿ ಮಾಡಿ ಪ್ರತ್ಯೇಕ ಪಹಣಿ ದಾಖಲು ಮಾಡಬೇಕಾಗಿದ್ದು ನಿಯಮವಾಗಿರುತ್ತದೆ. ಸದರಿ ದೂರುದಾರರಿಗೆ ಮಂಜೂರಾದ ಜಾಗವು 1 ರಿಂದ 5 ನಮೂನೆಯಲ್ಲಿ ಅಳವಡಿಸಲ್ಪಟ್ಟಿದ್ದು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಕಳುಹಿಸಲಾಗಿದೆ. ಸದರಿ 1 ರಿಂದ 5 ನಮೂನೆ ಮುಖಾಂತರ ದೂರುದಾರರ ದರಕಾಸ್ತು ಜಾಗ ದುರಸ್ಥಿ ಕಾರ್ಯಕೈಗೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಸಮಯ ಅವಕಾಶ ಬೇಕಾಗಿರುತ್ತದೆ ಎಂದು ನಮೂದಿಸಿರುತ್ತಾರೆ.*

3. ಎದುರುದಾರರು ತಮ್ಮ ಪತ್ರ ದಿನಾಂಕ 27/02/2017ರಂತೆ ತಮ್ಮ ಮುಂದುವರೆದ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ *"ಪರಿಶೀಲಿಸಲಾಗಿ ಪ್ರಕರಣಕ್ಕೆ ಸಂಬಂಧಿಸಿದ ಮೂಲ ಪುಕಾರು ಅರ್ಜಿ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಮೂಲ ಪುಕಾರಿನಂತೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು"* ಎಂದು ನಮೂದಿಸಿರುತ್ತಾರೆ.

4. ಎದುರುದಾರರು ತಮ್ಮ ಪತ್ರ ದಿನಾಂಕ 10/04/2017ರಂತೆ ತಮ್ಮ ಮುಂದುವರೆದ 2ನೇ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ *"ಫಿರ್ಯಾದಿ ಹೆಸರಿಗೆ ಹಕ್ಕು ಪತ್ರ ನೀಡಿದಂತೆ ಆರ್‌ಟಿಸಿ ದಾಖಲೆಯಾಗಿದ್ದು ದುರಸ್ಥಿಯಾಗಿರುವುದಿಲ್ಲ. ನಮೂನೆ 1 ರಿಂದ 5 ಅನ್ನು ತಯಾರಿಸಿ ಅನುಮೋದನೆಗಾಗಿ ಮಾನ್ಯ ಸಹಾಯಕ ಆಯುಕ್ತರು, ಮಡಿಕೇರಿ ಉಪವಿಭಾಗ, ಮಡಿಕೇರಿ ಇವರ ಕಛೇರಿಗೆ ರವಾನಿಸಲಾಗಿರುತ್ತದೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಂದ ದುರಸ್ಥಿಗೆ ಗ್ರಾಮವಾರು ವಿಂಗಡಿಸಿ ಮೋಜಣಿದಾರರಿಗೆ ಗ್ರಾಮವಾರು ಹಂಚಿಕೆ ಮಾಡಿ ನಿಯೋಜಿಸಬೇಕಿರುತ್ತದೆ. ಅದರಂತೆ, ಗ್ರಾಮವಾರು ಎಲ್ಲಾ ಸರ್ವೆ ನಂಬರ್‌ಗಳನ್ನು ದುರಸ್ಥಿ ಕಾರ್ಯ ಪೂರ್ಣಗೊಳಿಸಲು ಕಾಲಾವಕಾಶದ ಅಗತ್ಯವಿರುತ್ತದೆ"* ಎಂದು ನಮೂದಿಸಿರುತ್ತಾರೆ.

5. ಎದುರುದಾರರು ತಮ್ಮ ಪತ್ರ ದಿನಾಂಕ 30/05/2017ರಂತೆ ತಮ್ಮ ಮುಂದುವರೆದ 3ನೇ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ *"ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿಯವರ ದೂರನ್ನು ಪರಿಶೀಲಿಸಿ ದಿನಾಂಕ 31/07/2017ರ ಒಳಗೆ ದಾಖಲೆಗಳನ್ನು ತಹಶೀಲ್ದಾರ್‌ರ ಕಛೇರಿಗೆ ಹಾಜರಿಪಡಿಸಲು ಆದೇಶಿಸಿದಂತೆ ಈ*

*ಕಛೇರಿಯಿಂದ ದಿನಾಂಕ 29/03/2017 ರಂದು ಅರ್ಜಿದಾರರಿಗೆ ನೋಟಿಸ್ಸು ನೀಡಿದ್ದು ತಹಲ್‌ವರೆಗೆ ಅರ್ಜಿದಾರರು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ"* ಎಂದು ನಮೂದಿಸಿರುತ್ತಾರೆ.

6. ಫಿರ್ಯಾದುದಾರರು ಎದುರುದಾರರ ಆಕ್ಷೇಪಣೆ ಮತ್ತು ವರದಿಗಳಿಗೆ ದಿನಾಂಕ 16/10/2017ರಂತೆ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಸದರಿ ಪ್ರತ್ಯುತ್ತರದಲ್ಲಿ *"ಕಳೆದ ಮೂರು ವರ್ಷಗಳಿಂದ ಮಾನ್ಯ ತಹಶೀಲ್ದಾರ್‌ರವರು ಬೇಜವಾಬ್ದಾರಿಯಿಂದ ನನ್ನ ಆಸ್ತಿಯ ದುರಸ್ಥಿಯ ಬಗ್ಗೆ ವ್ಯವಹರಿಸದೆ ನನ್ನನ್ನು ಸತಾಯಿಸಿರುತ್ತಾರೆ ಮತ್ತು ತಹಶೀಲ್ದಾರ್‌ರವರ ಈ ಹೇಳಿಕೆಯಿಂದ ನನಗೆ ಯಾವುದೇ ನ್ಯಾಯ ಸಿಗುವುದಿಲ್ಲ, ಅಲ್ಲದೆ ಕಡತವನ್ನು ವಿಳಂಭಗೊಳಿಸಿ ಬಡವನಾದ ನನಗೆ ಅನ್ಯಾಯ ಮಾಡುವ ಉದ್ದೇಶವಾಗಿರುತ್ತದೆ"* ಎಂದು ನಮೂದಿಸಿರುತ್ತಾರೆ. ದೂರುದಾರರು ತಮ್ಮ ಪತ್ರ ದಿನಾಂಕ 03/01/2017 ರಲ್ಲಿ "ದಿನಾಂಕ 13/04/2017 ರಂದು ಮಾನ್ಯ ಮಡಿಕೇರಿ ತಹಶೀಲ್ದಾರ್‌ರವರಿಗೆ ನನ್ನ ಆಸ್ತಿಯ ದುರಸ್ತಿಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಈವರೆಗೂ ಜಮೀನಿನ ದುರಸ್ತಿಯಾಗದೆ ವಿಳಂಭ ಮಾಡಿದ್ದಾಗಿ ತಿಳಿಸಿರುತ್ತಾರೆ".

7. ಕಡತದ ದಾಖಲೆಗಳಿಂದ ಹಕ್ಕು ಪತ್ರ ನೀಡಿದ ದಿನಾಂಕ 27/02/2004 ರಿಂದ ಈವರೆಗೂ ಪಿರ್ಯಾದುದಾರರಿಗೆ ಹಕ್ಕು ಪತ್ರ ನೀಡಿದ ಆಸ್ತಿಯ ದುರಸ್ಥಿಯಾಗದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಮಡಿಕೇರಿ ತಾಲ್ಲೂಕು ಕೆ. ಪೆರಾಜೆ ಗ್ರಾಮದ 89/1 ಸರ್ವೇ ನಂಬರಿನಲ್ಲಿರುವ 0.03 3/4 ಎಕ್ರೆ ಜಾಗಕ್ಕೆ ದೂರುದಾರರಿಗೆ ಹಕ್ಕು ಪತ್ರ ದೊರೆತಿದ್ದು, ಸದರಿ ಆಸ್ತಿಯನ್ನು ನಿಯಮಾನುಸಾರ ದುರಸ್ಥಿಗೊಳಿಸಿ ವರದಿ ಸಲ್ಲಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಒಂದು ತಿಂಗಳೊಳಗೆ** ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 26/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**